ಇ) ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿನ ಅರೆಕಾಲಿಕ ಉಪನ್ಯಾಸಕರ ಸೇವೆಯನ್ನು (ಶೇಕಡ 55 ಅಂಕಗಳಿಗಿಂತ ಕಡಿಮೆ ಆದರೆ ಶೇಕಡ 50ಕ್ಕಿಂತ ಹೆಚ್ಚು ಇರುವವರು) ಸಕ್ರಮಗೊಳಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ. ಈ ಹುದ್ದೆಗಳನ್ನು ಭರ್ತಿಮಾಡಲು ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಬೈಂದೂರು ಕ್ಷೇತ್ರದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯಾಧಿಕಾರಿಗಳ ಕರ್ತವ್ಯಲೋಪ

2533(2983) ಶ್ರೀ ಗೋಪಾಲ ಪೂಜಾರಿ ಕೆ. (ಕಾರ್ಕಳ) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬೈಂದೂರು ವಿಧಾನಸಭಾ ಕ್ಷೇತ್ರದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಚಿಕಿತ್ಸೆಗಾಗಿ ಬರುವ ಸಾರ್ವಜನಿಕರಿಗೆ ಅಲ್ಲಿಯ ವೈದ್ಯಾಧಿಕಾರಿಗಳ ಗೈರುಹಾಜರಾತಿಯಿಂದ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ದಿನಾಂಕ : 20-6-2001 ರಂದು ಶಾಸಕರು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡುವುದಾಗಿ ತಿಳಿಸಿದ್ದರೂ ಸಹ ಗೈರುಹಾಜರಾದ ವೈದ್ಯಾಧಿಕಾರಿಗಳ ಮೇಲೆ ಸರ್ಕಾರ ಕೈಗೊಳ್ಳುವ ಕ್ರಮವೇನು?

ಶ್ರೀ ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ) ಬಂದಿರುವುದಿಲ್ಲ.

ಆ) ವೈದ್ಯಾಧಿಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿನ ಸರ್ಕಾರಿ ಸೇವೆಗೆ ಅನಧಿಕೃತ ಗೈರುಹಾಜರಿಯಾಗಿಲ್ಲ. ಆದರೆ ಪ್ರಾಥಮಿಕ ಆರೋಗ್ಯ ಕೇಂದ್ರ, ಹಕ್ಲಾಡಿಯ ಸಭೆಗೆ ಹಾಜರಾಗದೆ ಗೈರುಹಾಜರಾಗಿರುವುದು ತಿಳಿದುಬಂದಿರುತ್ತದೆ. ಸದರಿ ವೈದ್ಯರಿಂದ ವಿವರಣೆ ಕೇಳಲಾಗಿದೆ. ವಿವರಣೆ ಬಂದ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಮೈಸೂರು ತಾಲ್ಲೂಕಿನಲ್ಲಿ ಕುಟುಂಬ ಕಲ್ಯಾಣ ಕಾರ್ಯಕ್ರಮಗಳು

2534 (2964) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) :— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕಳೆದ ಒಂದು ವರ್ಷ ಅವಧಿಯಲ್ಲಿ ಮೈಸೂರು ತಾಲ್ಲೂಕಿನ ಎಷ್ಟು ಜನರಿಗೆ ಕುಟುಂಬ ಯೋಜನೆ ಶಸ್ತ್ರಚಿಕಿತ್ಸೆ ನಡೆಸಲಾಗಿದೆ. (ಕೇಂದ್ರವಾರು ಹಾಗೂ ಗಂಡಸರು ಮತ್ತು ಮಹಿಳೆಯರ ವಿವರ ಪ್ರತ್ಯೇಕವಾಗಿ ಕೊಡುವುದು)

ಅ) ಈ ರೀತಿ ಕುಟುಂಬ ಕಲ್ಯಾಣ ಯೋಜನೆಯನ್ನು ಅಳವಡಿಸಿಕೊಂಡ ಜನರಿಗೆ ಯಾವ ದರದಲ್ಲಿ ಎಷ್ಟು ಪ್ರೋತ್ಸಾಹಧನ ವಿತರಿಸಲಾಗಿದೆ. ಪ್ರೋತ್ಸಾಹಧನದಲ್ಲಿ ಗಂಡು ಮತ್ತು ಹೆಣ್ಣು ಎಂಬ ತಾರತಮ್ಯ ವಿನಾದರೂ ಇದೆಯೇ, ಇದ್ದರೆ ಕಾರಣವೇನು;

ಇ) ಆರ್ಥಿಕ ಪ್ರೋತ್ಸಾಹವಲ್ಲದೆ ಬೇರೆ ಯಾವುದಾದದರೂ ರೀತಿಯ ಸೌಲಭ್ಯ ನೀಡಲಾಗಿದೆಯೆ;

ಈ) ನೀಡಲಾಗಿದ್ದಲ್ಲಿ ಎಷ್ಟು ಮಂದಿಗೆ ಯಾವ ರೀತಿಯ ಸೌಲಭ್ಯ ತಲುಪಿದೆ;

ಉ) ಈ ರೀತಿಯ ಸೌಲಭ್ಯ ಅರ್ಹರಿಗೆ ತಲುಪಿದ ಬಗ್ಗೆ ಯಾವ ಮೂಲದಿಂದ ಖಚಿತಪಡಿಸಿಕೊಳ್ಳಲಾಗಿದೆ, ಅಥವಾ ಖಚಿತಪಡಿಸಿಕೊಳ್ಳಲು ಅವಕಾಶ ವಿನಾದರೂ ಇದೆಯೇ?

ಶ್ರೀ ಎ.ಬಿ. ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :—

ಅ) 2000-2001ನೇ ವರ್ಷದಲ್ಲಿ ಮೈಸೂರು ತಾಲ್ಲೂಕಿನಲ್ಲಿ 2937 ಕುಟುಂಬ ಕಲ್ಯಾಣ ಶಸ್ತ್ರಚಿಕಿತ್ಸೆಗಳಾಗಿದ್ದು ವಿವರಗಳು ಕೆಳಕಂಡಂತೆ ಇವೆ.

ಕ್ರಮ ಸಂಖ್ಯೆ	ಪ್ರಾಥಮಿಕ ಆರೋಗ್ಯ ಕೇಂದ್ರ	ಪುರುಷ ಶಸ್ತ್ರ ಚಿಕಿತ್ಸೆ	ಮಹಿಳಾ ಶಸ್ತ್ರ ಚಿಕಿತ್ಸೆ	ಒಟ್ಟು
1.	ಇಲವಾಲ	2	346	348
2.	ಬೀರಿಹುಂಡಿ	-	222	222
3.	ಜಯಪುರ	-	196	196
4.	ಸಾಗರಕಟ್ಟೆ	-	205	205
5.	ಸಿದ್ದರಾಮನಹುಂಡಿ	-	302	302
6.	ಕಡಕೋಳ	-	247	247
7.	ಕೇಳನವುರ	-	318	318
8.	ಮಲ್ಲಹಳ್ಳಿ	-	182	182
9.	ಹುಚ್ಚ	-	158	158
10.	ದೂರ	-	278	278
11.	ಮೂಗನಹುಂಡಿ	-	181	181
12.	ನಾಗನಹಳ್ಳಿ	-	177	177
13.	ಮದ್ದೂರು ಕಲ್ಲಹಳ್ಳಿ	-	123	123
	ಒಟ್ಟು	2	2935	2937

ಅ) ಪುರುಷರಿಗೆ ತಲಾ 100 ರೂ.ನಂತೆ ಹಾಗೂ ಸ್ತ್ರೀಯರಿಗೆ ತಲಾ 70 ರೂ.ನಂತೆ ಪರಿಹಾರ ಧನ ನೀಡಲಾಗುತ್ತಿದೆ. ಇದನ್ನು ತಾರತಮ್ಯವೆಂದು ಭಾವಿಸಲು ಬರುವುದಿಲ್ಲ.

ಇ) ಇಲ್ಲ

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

ಪ್ರಾಥಮಿಕ ಮಟ್ಟದಿಂದ ಪ್ರೌಢ ಶಿಕ್ಷಣದವರೆಗೂ ವೃತ್ತಿಪರ ಶಿಕ್ಷಣ

2535(2965) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) :— ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ಪ್ರಾಥಮಿಕ ಮಟ್ಟದಿಂದ ಪ್ರೌಢ ಶಿಕ್ಷಣದವರೆಗೆ ಯಾವ ಯಾವ ಇಲಾಖೆಗಳಲ್ಲಿ ವೃತ್ತಿಪರ ಶಿಕ್ಷಣ ನೀಡಲಾಗುತ್ತಿದೆ.

2) ಮೈಸೂರು ತಾಲ್ಲೂಕು ಸೇರಿದಂತೆ ಮೈಸೂರು ಜಿಲ್ಲೆಯ ಗ್ರಾಮೀಣ ಪ್ರದೇಶದಲ್ಲಿ ಎಷ್ಟು ಕಡೆ ವೃತ್ತಿಪರ ಶಿಕ್ಷಣ ಕೊಡಲಾಗುತ್ತಿದೆ.

3) ಹಾಗಿದ್ದಲ್ಲಿ ಯಾವ ಯಾವ ವರ್ಗದ ಶಿಕ್ಷಣ ನೀಡಲಾಗುತ್ತಿದೆ.

4) ಪ್ರಾಥಮಿಕ ಮಟ್ಟದಲ್ಲಿಯೂ ಸಹ ಗ್ರಾಮೀಣ ಪ್ರದೇಶದ ವೃತ್ತಿಗಳಾದ ಬಡಗಿ, ಕುರಿ, ಕೋಣ, ಹಸು, ಹಂದಿ ಸಾಕಣೆ ಒಕ್ಕಲುತನ, ತೋಟಗಾರಿಕೆ, ಕಮ್ಮಾರಿಕೆ, ಕುಂಬಾರಿಕೆ ಮುಂತಾದ ವೃತ್ತಿಗಳಲ್ಲಿ ತರಬೇತಿಯನ್ನು ನೀಡಲು ಅಗತ್ಯ ತಾತ್ರಿಕ ಪರಿಣತಿಯುಳ್ಳ ಪಠ್ಯ ಕ್ರಮ ತಯಾರಿಸಿ ತರಬೇತಿಯನ್ನು ನೀಡಲು ಏನಾದರೂ ಯೋಜನೆಯನ್ನು ಹಾಕಿಕೊಳ್ಳಲಾಗಿದೆಯೆ;

5) ಇಲ್ಲವಾದಲ್ಲಿ ಈ ಯೋಜನೆ ಜಾರಿಗೆ ತರಲು ಇರುವ ಅಡಚಣೆಗಳೇನು ಎಂದಿನಿಂದ ಜಾರಿಗೆ ತರಲಾಗುವುದು.

ಶ್ರೀ ಹೆಚ್. ವಿಶ್ವನಾಥ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :—

1), 2), 3) ಪ್ರಾಥಮಿಕ ಶಿಕ್ಷಣದಲ್ಲಿ ವೃತ್ತಿಪರ ಶಿಕ್ಷಣ ನೀಡಲಾಗುತ್ತಿಲ್ಲ. ಪ್ರೌಢಶಾಲಾ ಹಂತದಲ್ಲಿ ಎಲ್ಲಾ ಸರ್ಕಾರಿ ಪ್ರೌಢಶಾಲೆಗಳಲ್ಲಿ ಚಿತ್ರಕಲೆ, ಸಂಗೀತ, ಹೊಲಿಗೆ ವಿಷಯಗಳಲ್ಲಿ ವೃತ್ತಿಪರ ಶಿಕ್ಷಣ ನೀಡಲಾಗುತ್ತಿದೆ.

4) ಇಲ್ಲ

5) ಅಂತಹ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.